ಪಾಲಿಕೆಯ ಹಳೆಯ 100 ವಾರ್ಡ್‌ಗಳ ಪೈಕಿ ಈಗಾಗಲೇ 29 ವಾರ್ಡ್‌ಗಳಲ್ಲಿ ಜಿಐಎಸ್ ಮೂಲಕ ಎಲ್ಲಾ ಸ್ವತ್ತುಗಳ ವಿವರಗಳನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ವಾರ್ಡ್‌ಗಳಲ್ಲೂ ಕೂಡ ಇದೇ ರೀತಿ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : (132)230
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ(ಪಿರಾ)
ಉತ್ತರಿಸುವ ಸಚಿವರು : (ಶ್ರೀ ಬಿ.ಎಸ್.ಯಡಿಯೂರಪ್ಪ
: ಮಾನ್ಯ ಮುಖ್ಯಮಂತ್ರಿಗಳು

ಅ. ರಾಜ್ಯದಲ್ಲಿ ಕಲ್ಲುಗಣಿಗುತ್ತಿಗೆಗಳನ್ನು ಈ ಹಿಂದೆ ಸರ್ಕಾರಿ ಗೋಮಾಳ ಜಮೀನಿನಲ್ಲಿ ನೀಡಿದ್ದು, ನಂತರ ಸರ್ಕಾರವು ಗೋಮಾಳದ ಜಮೀನಿನಲ್ಲಿ ಕಲ್ಲುಗುಣಿಗುತ್ತಿಗೆಯನ್ನು ನಿಷೇಧಿಸಿ, ಸರ್ಕಾರಿ ಆದೇಶವನ್ನು ಹೊರಡಿಸಿದ ನಂತರವೂ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸುತ್ತೋಲೆ ಸಂಖ್ಯೆ: RD 83 LGP 2006, ದಿನಾಂಕ 05–01–2007 ರಲ್ಲಿ ಗೋಮಾಳ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿರ್ಬಂಧವಿರುತ್ತದೆ. ಅಂತೆಯೇ, ಸದರಿ ಸುತ್ತೋಲೆಯ ದಿನಾಂಕದಿಂದ ರಾಜ್ಯದಲ್ಲಿನ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗಣಿಗುತ್ತಿಗೆಗಳ ಮಂಜೂರಾತಿ/ನವೀಕರಣವನ್ನು ಮಾಡಿರುವುದಿಲ್ಲ. ಆದರೆ, ದಿನಾಂಕ 05–01–2007 ರ ಪೂರ್ವದಲ್ಲಿ ಮಂಜೂರು ಮಾಡಿರುವ / ನವೀಕರಿಸಲ್ಪಟ್ಟಿರುವ ಕಲ್ಲುಗುಣಿಗುತ್ತಿಗೆಗಳು ಅವಧಿ ಮುಕ್ತಾಯದವರೆಗೆ ಚಾಲ್ತಿಯಲ್ಲಿರುತ್ತವೆ.

ಮಾನ್ಯ ಉಚ್ಚ ನ್ಯಾಯಾಲಯವು W.P.No.15882/07ರಲ್ಲಿ ದಿನಾಂಕ 15–02–2008 ರಂದು ನೀಡಿರುವ ತೀರ್ಪಿನಲ್ಲಿ, ದಿನಾಂಕ: 05–01–2007 ರ ಸುತ್ತೋಲೆಯನ್ನು ರದ್ದುಪಡಿಸಿದ್ದು, ದಿನಾಂಕ:24–02–1999 ರ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳ್ವನಯ, 3 ತಿಂಗಳೊಳಗಾಗಿ ಗೋಮಾಳ ಪ್ರದೇಶಗಳಲ್ಲಿ ಹೊಸದಾಗಿ ಕಲ್ಲುಗುಣಿ ಗುತ್ತಿಗೆ ಮಂಜೂರು ಮಾಡುವ / ಚಾಲ್ತಿಯಲ್ಲಿರುವ ಗುತ್ತಿಗೆಗಳನ್ನು ನವೀಕರಿಸುವ ಬಗ್ಗೆ ಕ್ರಮವಹಿಸುವಂತೆ ಆದೇಶಿಸಿದೆ. ದಿನಾಂಕ:15–02–2008 ರ ತೀರ್ಪಿನನ್ವಯ ಬಾಕಿ ಪ್ರಸ್ತಾವನೆಗಳ ವಿಲೇವಾರಿ ಕುರಿತು ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರಿಗೆ ಸೂಚಿಸಿದೆ. ದಿನಾಂಕ:15–02–2008ರ ತೀರ್ಪಿನ ವಿರುದ್ಧ ಕಂದಾಯ ಇಲಾಖೆಯು ಮೇಲ್ಮನವಿಯನ್ನು ಸಲ್ಲಿಸಿದ್ದು, ಇತ್ಯರ್ಥವಾಗಬೇಕಿದೆ.

ಆ. ಹಾಗಿದ್ದಲ್ಲಿ, ಸದರಿ ಮಾಹಿತಿಯನ್ನು ಒದಗಿಸುವುದು;

ರಾಮನಗರ, ಬೆಂಗಳೂರು ಉತ್ತರ, ಚಿಕ್ಕಮಗಳೂರು, ಶಿವಮೊಗ್ಗ, ಕೋಲಾರ ಹಾಗೂ ಹಾಸನ ಜಿಲ್ಲೆಗಳಲ್ಲಿ 43 ಗೋಮಾಳ ಪ್ರದೇಶಗಳಲ್ಲಿ, ಅವಧಿ ಮುಗಿದು, ಗುತ್ತಿಗೆಗಳನ್ನು ನವೀಕರಿಸದೇ ಇರುವ ಪ್ರದೇಶಗಳಲ್ಲಿ ನಡೆಯುತ್ತಿದ್ದ ಅಕ್ರಮ ಕಲ್ಲು ಗಣಿಗಾರಿಕೆ ತಡೆಗಟ್ಟಿ, ರೂ.14,79,564/– ಗಳನ್ನು ದಂಡ ರೂಪದಲ್ಲಿ ವಸೂಲಿ ಮಾಡಲಾಗಿದೆ.

ಇ ಅವು ಯಾವುವು, ಇವುಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

(1) ರಾಮನಗರ ಜಿಲ್ಲೆ:– 7 ಅಕ್ರಮ ಕಲ್ಲು ಗಣಿಗಾರಿಕೆಯ ಪ್ರಕರಣಗಳಲ್ಲಿ, ಮೊಕದ್ದಮೆ ದಾಖಲಿಸಿದ್ದು, 5 ಪ್ರಕರಣಗಳಲ್ಲಿ ಗುತ್ತಿಗೆ ದಾರರು ತಡೆಯಾಜ್ಞೆ ತಂದು ಕೆಲಸ ನಿರ್ವಹಿಸುತ್ತಿದ್ದಾರೆ. ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗಿದೆ.

(2) ಬೆಂಗಳೂರು ಉತ್ತರ ಜಿಲ್ಲೆ:– ಅಕ್ರಮ ಕಲ್ಲುಗಣಿಗಾರಿಕೆಯ 9 ಪ್ರಕರಣಗಳನ್ನು ಪತ್ತೆ ಹಚ್ಚಿ, ರೂ.7,22,564/–ಗಳನ್ನು ದಂಡ ರೂಪದಲ್ಲಿ ವಸೂಲಿ ಮಾಡಲಾಗಿದೆ.

(3) ಚಿಕ್ಕಮಗಳೂರು ಜಿಲ್ಲೆ:– ಅಕ್ರಮ ಕಲ್ಲು ಗಣಿಗಾರಿಕೆಯ 3 ಪ್ರಕರಣಗಳನ್ನು ಪತ್ತೆ ಹಚ್ಚಿ, ಅಕ್ರಮ ಕಲ್ಲುಗಣಿಗಾರಿಕೆಯನ್ನು ತಡೆಗಟ್ಟಿ, ರೂ.15,000/–ಗಳ ದಂಡ ವಸೂಲಿ ಮಾಡಲಾಗಿದೆ.

(4) ಶಿವಮೊಗ್ಗ ಜಿಲ್ಲೆ:– 5 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.2,17,750/–ಗಳ ದಂಡ ವಸೂಲಿ ಮಾಡಲಾಗಿದೆ.

(5) ಕೋಲಾರ ಜಿಲ್ಲೆ:– 3 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.4,37,500/–ಗಳ ದಂಡ ವಸೂಲಿ ಮಾಡಲಾಗಿದೆ.

(6) ಹಾಸನ ಜಿಲ್ಲೆ:– 16 ಪ್ರಕರಣಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕ್ರಮಕೈಗೊಂಡು ರೂ.,86,750/–ಗಳ ದಂಡ ವಸೂಲಿ ಮಾಡಲಾಗಿದೆ.

ಕಾಲಕಾಲಕ್ಕೆ ತಪಾಸಣೆ ಕೈಗೊಂಡು, ಅಕ್ರಮ ಕಲ್ಲು ಗಣಿಗಾರಿಕೆಯನ್ನು ನಿಯಂತ್ರಿಸಲಾಗಿದೆ. ಮೇಲಿನ ಪ್ರದೇಶಗಳಲ್ಲಿ ಅಕ್ರಮ ಕಲ್ಲುಗಣಿಗಾರಿಕೆಯನ್ನು ಸ್ಥಗಿತಗೊಳಿಸಿದ್ದು, ಅಂತಹ ಪ್ರದೇಶಗಳ ಮೇಲೆ ಪೂರ್ಣ ನಿಗಾ ವಹಿಸಲಾಗುತ್ತಿದೆ. ಈ ವಿಷಯಗಳನ್ನು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಗಮನಕ್ಕೆ ತರಲಾಗುತ್ತಿದೆ.